Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 178] ಶನಿವಾರ 7—4—45 [3 ಪೈ

ಗೋರಿಂಗ್ ನತನೆ?

ಹಿಟ್ಲರಿಗೂ, ಗೋರಿಂಗಿಗೂ ಜರುಸು ಮಾತುಗಳಾಗಿ, ಗೋರಿಂಗ್ ಪ್ರಾಣ ತ್ಯಾಗ ಮಾಡಿಕೊಂಡನೆಂದೂ, ಕೆಸಲಿಂಗನ್ನು ದಸ್ತಗಿರಿ ಮಾಡಬೇಕೆಂದು ಹಿಟ್ಲರಿನ ಆಜ್ಞೆಯಾಗಿದೆಯೆಂದೂ ಲಂಡನ್‌ನಿಂದ ವಾರ್ತೆ ಬಂದಿದೆ.

ಮಿತ್ರ ಸೇನೆಗೆ ಖೈದಿಯಾಗಿ ಸಿಕ್ಕಿರುವ ಮೊದಲನೇ ಜರ್ಮನ್ ರಾಜಕುಮಾರ ಅರೆನಬರ್ ಗೋರಿಂಗನು ನಾಡ್ರ್ಕಿರ್ಚೆನ್ ಕ್ಯಾಸಲ್ಲಿನಲ್ಲಿ ಮೃತನಾದನೆಂದು ಹೇಳಿಕೆ ಕೊಟ್ಟಿದ್ದಾನೆ.

ಶತ್ರುಗಳು ಸುಲಭವಾಗಿ ಶರಣಾಗತರಾಗುವ ಸಂಭವವಿಲ್ಲವೆಂದು ಫ್ರೊ. ರೂಸ್ವೆಲ್ಟರಿಗೆ ಬರೆದಿರುವ ಪತ್ರದಲ್ಲಿ ಜನರಲ್ ಐಸೆಹೋವರು ತಿಳಿಸಿರುವರು.

ಜರ್ಮನಿಯಲ್ಲಿ ರಷ್ಯನ್ ಸೇನೆ, ಬ್ರಿಟನ್ ಅಮೇರಿಕಾ ಸೇನೆಗಳ ಟ್ಯಾಂಕ್ ಪಡೆಗಳು ಒಟ್ಟಿಗೆ 3 ದಿವಸದಲ್ಲಿ ಕೂಡುವ ಸಂಭವವಿದೆ.

ಹೆಸರು ಬದಲಾಯಿಸಿಕೊಂಡು ಬರುವ ನಾಜಿ ಅಪರಾಧಿಗಳಿಗೆ ಸ್ವೀಡನ್ ಆಶ್ರಯ ಕೊಡುವುದಿಲ್ಲವೆಂದು ಪ್ರಕಟಿಸಿದೆ.

ನಾಜಿಗಳು ಕಿರುಕೊಳ ಯುದ್ಧಮಾಡಲು ನಿಶ್ಚಯಿಸಿರುವರು.

ಜರ್ಮನಿಯವರಿಗೆ ಉತ್ಕಟ ಕಾಲವೊದಗಿದೆ. ಪ್ರಜೆಗಳು ಐಕ್ಯತೆಯಿಂದ ಶತ್ರುಗಳನ್ನು ಎದುರಿಸಬೇಕೆಂದು ಜರ್ಮನಿಯ ಕೇಳಿಕೆಯಾಗಿದೆ.

ಕೆಂಪು ಬಲ್ಗೇರಿಯಾ ಸೇನೆ ತುರ್ಕಿ ಗಡಿಗೆ ಬಂದಿದೆ !

ಜಪಾನಿನ ಮಿಲಿಟರಿ ಅಧಿಕಾರಿಯು ಹೇಳಿಕೆಯಂತೆ ಯೂರೋಪಿನ ಯುದ್ಧವು ನೋಗೆ ಮುಂಚಯೇ ಮುಗಿಯುವುದಂತೆ !

ತಿಂಗಳಿಗೆ ರೂ. 750 ಸಂಬಳದ ಮೇಲೆ 50 ಮಂದಿ ಗುಮಾಸ್ತರನ್ನು ಬ್ರಿಟನ್ನಿನಿಂದ ಭಾರತ ಸರಕಾರವು ಆಮದು ಮಾಡಲಿರುವುದು.

ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳ ಸಮ್ಮೇಳನವು ರಾಜಧಾನಿಯಲ್ಲಿ ಜುಲೈನಲ್ಲಿ ನಡೆಯುವುದೆಂದೂ, ಕಾಂಗ್ರೆಸ್ ಅಧ್ಯಕ್ಷರೇ ಇದರ ಅಧ್ಯಕ್ಷರೆಂದೂ ಪ್ರೊ. ರಂಗಾ ಮತ್ತು ಜೋಚಿಮ್ ಅಲ್ವ (ಫೋರಂ) ರವರು ಸಮ್ಮೇಳನಕ್ಕೆ ಬರುವವರಾಗಿರುವರೆಂದೂ ತಿಳಿಯಬಂದಿದೆ

ಮದರಾಸಿನಲ್ಲಿ 27 ಏ. ಆರ್. ಪಿ. ನಿಲ್ದಾಣಗಳನ್ನು ಬಂದು ಮಾಡಿದರು.

ಸ್ವಿಜ್ಜರ್ಲೆಂಡಿನ ಅಧಿಕೃತ ವರದಿಯಂತೆ ಮುಸಲೋನಿಗೆ ಅಲ್ಲಿ ಆಶ್ರಯವನ್ನು ಕೊಡುವುದಿಲ್ಲವಂತೆ.

ಶಹಬಾಸ್ ! ಲಂಡನ್ನಿನ ಎಂಪೈರ್ ಸಮ್ಮೇಳನದಲ್ಲಿ ಭಾರತವು ಇನ್ನೊಂದು ಡೊಮಿನಿಯನ್ ಎಂದು ಸರ್ ಕೆ ನೂನರವರು ಹೇಳಿದರು.

ಹಿಟ್ಲರ್ ಗಡ್ಡವನ್ನು ಬೆಳಸುತ್ತಿರುವನಂತೆ !

ಯುದ್ಧ ವಾರ್ತೆ

ಜರ್ಮನಿ— ಏಂಡ್ರೆ ಪಟ್ಟಣದಿಂದ ಜರ್ಮನರನ್ನು ಮಿತ್ರಸೇನೆ ಓಡಿಸಿ ಮುಲ್ ಹೌಸ್ ಪ್ರದೇಶವನ್ನು ಹಿಡಿದಿದೆ.

ಜಪಾನ್— ಈಗಿನ ಯುದ್ಧದಲ್ಲಿ ಜಪಾನ್ ಜರ್ಮನಿಗೆ ಸಹಾಯ ಮಾಡುತ್ತಿದೆ. ಜಪಾನ್-ರಷ್ಯಾ ಒಪ್ಪಂದ ಅರ್ಥವಿಲ್ಲದ್ದಾಗಿದೆ ಎಂದು ರಷ್ಯಾ ವಿದೇಶಾಂಗ ಮಂತ್ರಿಯು ಜಪಾನ್ ರಾಯಭಾರಿಗೆ ತಿಳಿಸಿದನು. ಮಾಜಿ ಅಡ್ಮಿರಲ್ ಬನಕಂಟಾಯ್ ಸುಸೂರ್ ಹೊಸ ಮಂತ್ರಿಮಂಡಲ ರಚಿಸಿದನು.

ರಷ್ಯಾ— ರಷ್ಯನ್ ಸೇನೆ ವಿಯನ್ನಾಕ್ಕೆ ಎರಡು ಮೈಲಿ ಹತ್ತಿರ ಬಂದಿದೆ. ಟೀನ್ಸ್ ರಸ್ತೆ ಛೇದಿಸಲಾಗಿದೆ.

ಬರ್ಮಾ— ಮಿತ್ರ ಸೇನೆ ಟಾಂಗು ಗುಡ್ಡವಶಪಡಿಸಿಕೊಂಡರು.

ಸಂಸ್ಥಾನದ ಸುದ್ದಿಗಳು

ಈಗ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಶ್ರೀಮತಿ ಯಶೋಧರ ದಾಸಪ್ಪನವರು ಮತ್ತು ಶ್ರೀ ನಿಜಲಿಂಗಪ್ಪನವರು ಜೊತ್ತುಬಾಕಿಯವರೆಲ್ಲಾ ನಾಮನಿರ್ದೇಶನಗಳನ್ನು ವಾಪಸ್ ತೆಗೆದುಕೊಂಡಿರುವರು.

ಚನ್ನಪಟ್ಟದ ತಾ || ಶಿಂಗಾಪುರದಲ್ಲಿ ಗೋಪಾಲ ಶೆಟ್ಟರೆಂಬುವರು ತಮ್ಮ ಎರಡು ತಿಂಗಳ ಶಿಶುವನ್ನು ದೆವ್ವವು ಭಾವಿಯಲ್ಲಿ ಹಾಕಿಬಿಟ್ಟಿತೆಂದು ಪೋಲೀಸಿಗೆ ಅರ್ಜಿ ಕೊಟ್ಟಿರುತ್ತಾರೆ.

ಬೆಂಗಳೂರಿನ ಅಶಾರಾ ಕಛೇರಿಯಲ್ಲಿ ' ಫೆಡರೇಷನ್ ಶಾಖೆಯೊಂದು ಸ್ಥಾಪಿಸಲಾಗಿದೆ ಡಾ | ಎಂ. ರತ್ನಸ್ವಾಮಿಯವರು ಇದರ ಅಡ್ವೈಸರ್.

ಜೂನ್ ತಿಂಗಳಲ್ಲಿ ಲಂಡನ್ನಿಗೆ ಭೇಟಿ ಕೊಡುವ ರಾಜರಲ್ಲಿ ನಮ್ಮ ಮಹಾರಾಜರೂ ಒಬ್ಬರೆಂದು ಹೇಳಲಾಗಿದೆ.

ಆಕಾಶವಾಣಿ 8—4—45

ವೃತ್ತಾಂತ ಬೆಳಿಗ್ಗೆ 8-50, ಮಧ್ಯಾಹ್ನ 2-50, ಸಾ. 6-30, 7-30. ರಾತ್ರಿ 10. ಬೆ. 8 ಕರ್ನಾಟಕ ಹಾಡುಗಾರಿಕೆ, 8-25 ಮೇಳವಾದ್ಯ. ಮ. 2-20 ಕೊಳಲು 2—30 ದ್ವಂದ್ವಗೀತೆ. ಸಾ. 6 ಪಟೀಲು 6-45 ಅಖಿಲ ಕ. ಮಕ್ಕಳ ಕೂಟ 7-15 ಹಾಡುಗಬ್ಬಗಳು, ರಾ. 8-30 ವೀಣೆ.

ವಿವಿಧ ವರ್ತಮಾನ

ಅಮೇರಿಕಾದ ಹೆಂಗಸೊಬ್ಬಳು ಅದೃಶ್ಯ ಗಾಜನ್ನು ಕಂಡುಹಿಡಿದಿರುವಳು. ಇವನ್ನು ಸಬ್‌ವೇರಿನ್ ಪೆರಿಸ್‌ಕೋಪಿನಲ್ಲಿ ಉಪಯೋಗಿಸಿದಕೆ ಬಹಳ ದೂರದವರೆಗೂ ನಡೆಯುವ ಚಲನವನ್ನು ನೋಡಬಹುದು. ಇದಕ್ಕಾಗಿ ಈಕೆಗೆ ಅಲ್ಲಿನ ವಿಶ್ವವಿದ್ಯಾನಿಲಯದವರು 2500 ಡಾಲರ್ ಬಹುಮಾನ ಕೊಟ್ಟರು.

ಭಾರತದಲ್ಲಿ ಅಮೇರಿಕಾದವರಿರುವುದು ಚೈನಾದವರಿಗೆ ಸಹಾಯ ಮಾಡುವುದಕ್ಕಿಂತ. ಚೈನಾಕ್ಕೆ ಎಣ್ಣೆ ಸಾಗಿಸಲು ಲಿಡೋನಿಂದ 750 ಮೈಲಿ ಕೊಳಾಯಿ ಕಟ್ಟಿ ಮುಗಿಸಿದರು. ಟೋಕಿಯೋ ಮೇಲೆ ಧಾಳಿ ಮಾಡಲು ವಿಮಾನ ನಿಲ್ದಾಣ (?) ಕಟ್ಟಿದರು. ಈಲಿಡೋ ಚೈನಾ ರಸ್ತೆಯಲ್ಲಿ ತಿಂಗಳಿಗೆ 40000 ಟನ್ ಯುದ್ಧ ಸಾಮಾಗ್ರಿಗಳು ಸಾಗುತ್ತಿವೆ. ಹಿಂದೆ ತಿಂಗಳಿಗೆ 18000 ಟನ್ನಿನಷ್ಟು ಮಾತ್ರ ಸಾಗುತ್ತಿದ್ದಿತು.

ಬ್ರಿಟನ್ನಿನಲ್ಲಿ ಈಗಿರುವಷ್ಟು ಕಲ್ಲಿ ಜ್ವಲ ಅಭಾವ ಮತ್ತೆಂದೂ ಕಾಲದಲ್ಲೂ ಇರಲಿಲ್ಲವೆಂದು ಗೊತ್ತಾಗಿದೆ.

ಯುದ್ಧಕೋಸ್ಕರ ಅಮೇರಿಕಾವು ಮಾರ್ಚಿಯಲ್ಲಿ 8246 ಮಿಲಿಯನ್ ಡಾಲರ್ ಖರ್ಚು ಮಾಡಿತು. ಇಷ್ಟು ಹಣ ಯಾವ ತಿಂಗಳು ನ್ಯಯಮಾಡಿರಲಿಲ್ಲವಂತೆ.

ಮದರಾಸ್ ಪೌರಸಭೆಯವರು ಲೈಸನ್ಸ್ ಫೀ ಜೊತೆಗೆ ಪ್ಲೇಟಿಗಾಗಿ ಒಂದಾಣೆ ಜೊತೆಯಲ್ಲಿ ವಸೂಲ್ಮಾಡುವರು.

ಜರ್ಮನಿಯು ಸೋಲುವುದಕ್ಕೆ ಮುಂಚೆ ಜಪಾನು ಚೀನಾದೊಂದಿಗೆ ಶಾಂತಿ ಮಾಡಿಕೊಳ್ಳಲು ಜಪಾನ್ ನ್ಯಯತ್ನಿಸುತ್ತಿರುವುದೆಂದು ವಾರ್ತೆ ಬಂದಿದೆ.

ಚೀಮೂರ್ ಮತ್ತು ಅಸ್ಸಿ ಖೈದಿಗಳ ಹೀಬಸ್ ಕಾರ್ಪಸ್ ಅರ್ಜಿಯು ಪ್ರಿವಿ ಕೌನ್ಸಿಲ್ಲಿಗೆ ಹೋಗುವ ಸಂಭವವಿದೆ.

ಶ್ರೀ ಶರತ್‌ಚಂದ್ರ ಬೋಸರು ಈಗ ಕುನ್ನೂರಿನಲ್ಲಿ ಬಂಧನದಲ್ಲಿಡಲ್ಪಟ್ಟಿದ್ದಾರೆಂದು ಕೇಂದ್ರ ಸಭೆಯಲ್ಲಿ ಹೇಳಲಾಗಿದೆ.

ಚಿನ್ನಾ ಬೆಳ್ಳಿ ಧಾರಣೆ

ಸೆನರ್ 1 ಕ್ಕೆ	ರೂ. 50-8-0
ಚಿನ್ನ ತೊಲ 1 ಕ್ಕೆ	74-0-0
ಬೆಳ್ಳಿ "	1-5-6

ವಾರ್ತಾತರಂಗ

ಪ್ರತಿಯೊಂದು ಹಳ್ಳಿಯಲ್ಲೂ ಒಂದೊಂದು ಪಾಠಶಾಲೆಯನ್ನು ತೆಗೆಯುವ ಸಲುವಾಗಿ ಹೈದರಾಬಾದ್ ನಿಜಾಮ ಸರ್ಕಾರವು 12 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುತ್ತದೆ.

ಂ ಂ

ಕಂಚಿಯಲ್ಲಿ ಒಬ್ಬ ಗುಮಾಸ್ತನು ಅಕ್ರಮವಾಗಿ ಮಾತನಾಡಿದನೆಂದು ವಿಚಾರಣೆಗೆ ಗುರಿಪಡಿಸಿರುವರು.

ಂ ಂ

ಬ್ರಿಟಿಷ್ ಚಲನ ಚಿತ್ರಗಳನ್ನು ಭಾರತದಲ್ಲಿ ಪ್ರದರ್ಶಿಸಿದನಂತರ ಜೈನಾದಲ್ಲಿ ಪ್ರದರ್ಶಿಸಲು ಏರ್ಪಾಡಾಗಿದೆ.

ಂ ಂ

ಬ್ರಿಟನ್ನಿನ 99 ಮಂದಿ ಸ್ತ್ರೀಯರು ಭಾರತದ ಮುಖಂಡರನ್ನು ಬಿಡುಗಡೆಮಾಡಿರೆಂದು ಚರ್ಚಿಲ್, ಅಮೆರಿ, ವೇವಲ್ ರವರಲ್ಲಿ ವಿನಂತಿ ಮಾಡಿಕೊಂಡಿರುವರು.

ಂ ಂ

5000 ಬೇಲ್ ಹತ್ತಿಯನ್ನು ಭಾರತದಿಂದ ಅಮೇರಿಕಾಕ್ಕೆ ರಫ್ತುಮಾಡುವರು.

ಂ ಂ

ಬಂಗಾಳ ಗೌರ್ನರರು ಸೆಕ್ರಟರಿಯೇಟ್ಟಿಗೆ ದಿಢೀರೆಂದು ಭೇಟಿಕೊಟ್ಟು ಎರಡು ಘಂಟೆ ಕಾಲ ಕಾರ್ಯಭಾರವನ್ನು ನೋಡಿದರು. ಈ ರೀತಿ ಮಾಡಿದವರಲ್ಲಿ ಇವರೇ ಮೊದಲನೆಯ ಗೌರ್ನರರು.

ಂ ಂ

ಮೆಹರ್‌ಪುರದಲ್ಲಿ ಗಂಡನು ಸೀರೆಯನ್ನು ತರಲಿಲ್ಲವೆಂದು ಹೆಂಡತಿಯು ಪ್ರಾಣತ್ಯಾಗ ಮಾಡಿಕೊಂಡಳು.

ಂ ಂ

ಈಗತಾನೆ ಫಿಲಿಪೈನ್ಸಿನಿಂದ ಒಬ್ಬ ಸಿಪಾಯಿಯು ತನ್ನ ಹೆಂಡತಿ ಮತ್ತು ನಾಲ್ಕು ಮಕ್ಕಳೊಡನೆ ವಾಷಿಂಗ್ಟನ್‌ಗೆ ಬಂದಿರುತ್ತಾನೆ. ಇವನ ಐಶ್ವರ್ಯಗಳನ್ನೆಲ್ಲಾ ಜಪಾನಿಗಳು ಸುಲಿಗೆ ಮಾಡಿದರೂ ತಾನೇ ಪ್ರಪಂಚದಲ್ಲೆಲ್ಲಾ ಐಶ್ವರ್ಯವಂತನೆಂದು ಹೇಳಿಕೊಂಡಿರುತ್ತಾನೆ. ಇವನ ಹೆಸರು ಬ್ರಿಗೇಡಿಯರ್ ಜನರಲ್ ಕಾಂಟೊಸ್ ಪಿ. ರೋಮುಲೊ.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

At Ranjit ❁ **Pagli Duniya**

ರಣಜಿತ್ ಟಾಕೀಸಿನಲ್ಲಿ 4 ನೇ ಅಮೋಘ ವಾರ

ಪಗಲಿದುನಿಯಾ

(ಹಿಂದಿ)

ನುಮ್ಮಾಜ್ ಶಾಂತಿ ಮೋತಿಲಾಲ್ ಷೇಕ್‌ಮುಕ್ತಾರ್

ಪಾತ್ರವಹಿಸಿರುವರು

AT OPERA — From 7-4-45

Air Raid Wardens

With Stan Laurel & Oliver Hardy

ಮುಂದಿನ ವಿನೋದ

'ಪೊಂಪಾವ್ಲೆ'

ಫೀಲ್ಡ್ ಮಾರ್ಷಲ್ ಮಾಂಟ್‌ಗೊಮರಿಯವರು ಕನಡಿಯನ್ ಮತ್ತು ಬ್ರಿಟಿಷ್ ಸೇನಾನಾಯಕರ ಕೂಡೆ ನಕಾಸು ನೋಡುತ್ತಿರುವುದು

ಅಕ್ಕರ ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ವೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು,

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Good Printing—

L. N. Press

Srirampet MYSORE

TALK-A-TONE

(Pioneer Film-mag of S. India)

From 1-3-45 Re. 1 per copy.

Local Agent—D. Mahadev

Opera Talkies, Mysore

ಅಂದವಾದ ಹೊಲಿಗೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ, ಮೈಸೂರು

Edited, Printed and published by M. S. Krishna Rao, at the Satyavadi Press, Chamaraja Agrahar, Mysore



ಐ.ಜೆ. ಹಾಲ್, ಸರಾಫ್ ಅಂಗಡಿ ರಸ್ತೆ ಬೀದಿ, ಮೈಸೂರು.